**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Aug – Oct 2022**

# ಶಿವಾಲಯದ ಕಂಬದಲ್ಲಿ ಕೃಷ್ಣಾವತಾರ

- ಡಾ. ಲಕ್ಷ್ಮೀ ರೇಖಾ ಅರುಣ್ , ಬೆಂಗಳೂರು.

ಬೆಂಗಳೂರು ನಗರದಲ್ಲಿರುವ ಸುಪ್ರಸಿದ್ಧ ದೇವಾಲಯಗಳಲ್ಲಿ ಹಲಸೂರಿನ ಶ್ರೀ ಸೋಮೇಶ್ವರ ದೇವಸ್ಥಾನವೂ ಒಂದು. ಅರೇ, ಮೇಲಿರುವ ಕಥೆಯ ಹೆಸರು ನೋಡಿದರೆ ಕೃಷ್ಣಾವತಾರ, ಮತ್ತೆ ಈಶ್ವರನ ದೇವಸ್ಥಾನದ ಬಗ್ಗೆ ಮಾತಾಡುತಿದ್ದೀನಿ ಅಂದ್ಕೊಂಡ್ರಾ? ಅದೇ ಸ್ವಾರಸ್ಯದ ಸಂಗತಿ, ಸಾಮರಸ್ಯದ ವಿಚಾರ.

ಚೋಳರು ಕಟ್ಟಿಸಿದ ಈ ದೇವಸ್ಥಾನವನ್ನು ವಿಜಯನಗರದ ಅರಸರು ಹಾಗೂ ನಂತರದಲ್ಲಿ ಯಲಹಂಕೆಯ ನಾಡ ಪ್ರಭುಗಳೂ ಜೀರ್ಣೋದ್ಧಾರ ಮಾಡಿದರೆಂದು ಪ್ರತೀತಿ. ಮಾಂಡವ್ಯ ಋಷಿಗಳು ಕೆಲವು ಕಾಲ ತಂಗಿದ್ದಂತಹ ಪುಣ್ಯ ಕ್ಷೇತ್ರವೆಂದೂ ಹೇಳುತ್ತಾರೆ[i].


ಇಂತಹ ಪ್ರಾಚೀನ ದೇವಾಲಯದಲ್ಲಿ ಬಹು ಸುಂದರವಾಗಿರುವ ಕೆತ್ತನಗಳು ಹಾಗೂ ಉಬ್ಬು ಶಿಲ್ಪಗಳನ್ನು ಕಾಣಬಹುದು. ಅಂದಿನ ಕಾಲದ ದೇವಾಲಯಗಳಲ್ಲಿ ಇರುವಂತೆ ಅನೇಕಾನೇಕ ಪ್ರಾಣಿ-ಪಕ್ಷಿಗಳು, ಋಷಿ-ಮುನಿಗಳು, ಸುಂದರ ಮಾನಿನಿಯರು, ದೇವ-ದೇವತೆಯರು, ನೃತ್ಯ ಶಿಲ್ಪಗಳು ಹಾಗೂ ಶಿವನ ವಿವಿಧ ಕಥೆಗಳ ಕೆತ್ತನೆಗಳನ್ನು ಹೇರಳವಾಗಿ ಕಾಣಬಹುದು.

ಇದೆಲ್ಲದರ ಮಧ್ಯೆ ನನ್ನ ಗಮನ ಸೆಳೆದಿದ್ದು, ಮುಖ್ಯ ಸನ್ನಿಧಿಯ ಎಡ ಭಾಗದಲ್ಲಿರುವ ಒಂದು ಕಂಬ. ೪೮ ಕಂಬಗಳಿರುವ ಮಂಟಪದಲ್ಲಿ ಪೂರ್ವ ದಿಕ್ಕಿನಲ್ಲಿ ಎರಡನೆಯ ಸಾಲಿನಲ್ಲಿ ಇರುವ ಈ ಕಂಬದ ನಾಲಕ್ಕೂ ಕಡೆಗಳಲ್ಲೂ ಕೃಷ್ಣಾವತಾರದ ವಿವಿಧ ಕೆತ್ತನೆಗಳನ್ನು ಕೆತ್ತಿರುವುದು ವಿಶೇಷವೆನಿಸಿತು, ಅದೂ ಸೋಮೇಶ್ವರನ ದೇವಸ್ಥಾನದಲ್ಲಿ. ಹರ ಮೇಲೋ ಹರಿ ಮೇಲೋ ಎಂದು ಇಂದಿಗೂ ಕಿತ್ತಾಡುವ ಮನೋಸ್ಥಿತಿಯಲ್ಲೇ ಇರುವ ಎಷ್ಟೋ ಜನರು ಇಂತಹ ದೇವಸ್ಥಾನಕ್ಕೆ ಒಮ್ಮೆ ಭೇಟಿ ಕೊಟ್ಟರೆ ಸಮರಸದ ಚಿಂತನೆಯ ಅರ್ಥ ತಿಳಿಯುವುದೇನೋ.

ಇಡಿಯ ಕಂಬವನ್ನುಮೂರು ಭಾಗಗಳಾಗಿ ವಿಂಗಡಿಸಿ ಕೆತ್ತನೆಯನ್ನು ಮಾಡಿದ್ದಾರೆ. ಕಂಬದ ಮುಂಭಾಗದ ಮೇಲಿನ ಭಾಗದಲ್ಲಿ, ಬಲಗೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದು, ಎಡಗೈಯನ್ನು ಇಳಿ ಬಿಟ್ಟು, ಬಲಗಾಲನ್ನು ತುದಿ ಬೆರಳುಗಳ ಮೇಲೆ ಇಟ್ಟು ನಿಂತಿರುವ ಮುದ್ದು ಕೃಷ್ಣನ ರೂಪವಿದೆ. ಮಧ್ಯದಲ್ಲಿ ಕಾಳಿಂಗನ ಮೇಲೆ ನರ್ತಿಸುತ್ತಿರುವ ಭಂಗಿಯನ್ನುಕೆತ್ತಿದ್ದರೆ, ಕೊನೆಯ ಕೆಳಗಿನ ಭಾಗದಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿ ಇರುವ ಸಿಂಹದ ಕೆತ್ತನೆ ಮೂಡಿಬಂದಿದೆ.







Copyright Protected

ಕಂಬದ ಎಡಗಡೆಯ ಮೇಲ್ಭಾಗದಲ್ಲಿ ಕೃಷ್ಣನು ಕೋಲನ್ನು ಹೊತ್ತ ಗೊಲ್ಲನಂತಿದ್ದರೆ, ಮಧ್ಯದಲ್ಲಿ ರಾಸ ಲೀಲೆ ಆಡುವ ಹಾಗೆ ಭಾಸವಾಗುತ್ತದೆ.





ಇನ್ನು ಕಂಬದ ಹಿಂಭಾಗಕ್ಕೆ ಬಂದರೆ, ಮೇಲಿನ ಭಾಗದಲ್ಲಿ ಅಂಬೆಗಾಲಿನ ಕೃಷ್ಣ ಕೈಯಲ್ಲಿ ಬೆಣ್ಣೆಯ ಪುಟ್ಟ ಮುದ್ದೆಯನ್ನು ಹಿಡಿದಿರುವ ಚಿತ್ರಣವಿದ್ದರೆ, ಮಧ್ಯದಲ್ಲಿ ಅದೇ ಬೆಣ್ಣೆಯ ಮಡಿಕೆಯನ್ನು ಇಟ್ಟುಕೊಂಡು ಕುಳಿತಿರುವ ಕೃಷ್ಣನಂತೆ ತೋರುತ್ತಾನೆ.





ಉತ್ತರ ದಿಕ್ಕಿಗೆ ಮುಖ ಮಾಡಿರುವ ಕಂಬದ ಮೇಲ್ಭಾಗದಲ್ಲಿ, ಆ ಇಂದ್ರನ ಕೋಪ ವೃಷ್ಟಿಯಿಂದ, ಇಡಿಯ ಗೋಕುಲವನ್ನು ರಕ್ಷಿಸಿದ ಗೋವರ್ಧನ ಗಿರಿಧಾರಿಯನ್ನುಕೆತ್ತಿದ್ದಾರೆ.



ಮಹಾಭಾರತದ ಪಾತ್ರಧಾರಿಗಳಲ್ಲಿ ಎಲ್ಲರಿಗೂ, ಎಲ್ಲ ಕಾಲಕ್ಕೂ ಎಲ್ಲ ವಯೋಮಿತಿಯವರಿಗೂ ಮನಸ್ಸಿಗೆ ಮುದ ಕೊಡುವುವನು ಈ ಕೃಷ್ಣನೇ ಅಲ್ಲವೇ? ಇಂತಹ ನೂರೆಂಟು ಪಾತ್ರಧಾರಿಗಳ ಕಥೆಗಳನ್ನು ಮುಂದಿನ ಪೀಳಿಗೆಗೆ ಹೇಳಿ, ತೋರಿಸಿ ಕೊಡಲು ಉತ್ತಮ ಜಾಗ ಇವೇ ದೇವಸ್ಥಾನಗಳು. ಹಾಗಾದರೆ ಒಮ್ಮೆ ಹೋಗಿ ಬರುತ್ತೀರಷ್ಟೇ - ಈ ಮುದ್ದು ಕೃಷ್ಣ ಹಾಗು ಆ ಸರ್ವವ್ಯಾಪಿ ಶಿವನನ್ನು ನೋಡಲು ಹಲಸೂರಿನ ಸೋಮೇಶ್ವರ ದೇವಸ್ಥಾನಕ್ಕೆ!

---

i https://www.kendasampige.com/%e0%b2%b9%e0%b2%b2%e0%b2%b8%e0%b3%82%e0%b2%b0%e0%b2%bf%e0%b2%a8-%e0%b2%b8%e0%b3%8b%e0%b2%ae%e0%b3%87%e0%b2%b6%e0%b3%8d%e0%b2%b5%e0%b2%b0-%e0%b2%a6%e0%b3%87%e0%b2%b5%e0%b2%be%e0%b2%b2%e0%b2%af-2/

Copyright Protected



**ಲೇಖಿಕೆಯ ಪರಿಚಯ :** ಡಾ. ಲಕ್ಷ್ಮೀ ರೇಖಾ ಅರುಣ್ ಅವರು ಲಾಸ್ಯ ಅಕಾಡೆಮಿ ಆಫ್ ಡಾನ್ಸ್, ಬೆಂಗಳೂರು ಇದರ ಸಂಸ್ಥಾಪಕ ನಿರ್ದೇಶಕಿ, ಗುರು ಡಾ. ವಸುಂಧರಾ ದೊರೆಸ್ವಾಮಿ ಅವರ ಹಿರಿಯ ಶಿಷ್ಯೆ . ಕಲಾವಿದೆ, ನೃತ್ಯ ಸಂಯೋಜಕಿ, ನಟ್ಟುವನಾರ್ ಹಾಗೂ ಯೋಗಾಧಾರಿತ ಭರತನಾಟ್ಯ ಶಿಕ್ಷಕಿ. ದಂತ ವೈದ್ಯದಲ್ಲಿ ರಜತ ಪದಕವನ್ನು ಗಳಿಸಿರುವ ಇವರು, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಮೈಸೂರಿನ ವಿದುಷಿ ಸರಸ್ವತಿ, ಟಿ.ವಿ. ಮಾಲಿನಿ ಹಾಗೂ ಬೆಂಗಳೂರಿನ ಶ್ರೀ. ಎಂ. ಆರ್. ಪ್ರಭಾಕರ್ ಮತ್ತು ಚಿಂತಲಪಲ್ಲಿ ಡಾ. ಆರ್. ರಮೇಶ್ ಅವರಲ್ಲಿ ತರಬೇತಿ ಪಡೆದಿದ್ದಾರೆ. ಇವರು ದೂರದರ್ಶನದ ಗ್ರೇಡೆಡ್ ಕಲಾವಿದೆಯಾಗಿದ್ದು, ಭರತನಾಟ್ಯದ ಮಾಸ್ಟರ್ಸ್ ಪದವಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಚೆನ್ನೈನ 'ಪ್ರಯತ್ನಂ' ಸಂಸ್ಥೆಯ ಅಡಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣದಲ್ಲಿ ತಮ್ಮ ಸಂಶೋಧನಾ ಲೇಖನವನ್ನು ಮಂಡಿಸಿದ್ದಾರೆ. ದೇಶದಾದ್ಯಂತ ಪ್ರದರ್ಶನ ನೀಡಿರುವ ಇವರಿಗೆ ನೃತ್ಯ ಶಿರೋಮಣಿ, ನೃತ್ಯ ಉಪಾಸಕಿ ಹಾಗೂ ವಸುಂಧರಾ ಪ್ರದರ್ಶಕ ಕಲೆಗಳ ಪ್ರಶಸ್ತಿ ಸಂದಿದೆ. ೨೦೦೮ ರಲ್ಲಿ ತಮ್ಮದೇ ಸಂಸ್ಥೆಯಾದ ಲಾಸ್ಯ ಅಕಾಡೆಮಿ ಆಫ್ ಡಾನ್ಸ್ ಅನ್ನು ಸಂಸ್ಥಾಪಿಸಿ, ನೂರಾರು ಮಕ್ಕಳಿಗೆ ಭರತನಾಟ್ಯ, ಯೋಗ ಹಾಗೂ ಕರ್ನಾಟಕ ಸಂಗೀತ ಕಲೆಯನ್ನು ಕಲಿಸಿಕೊಡುತ್ತಿದ್ದಾರೆ. ತಮ್ಮ ಸಂಸ್ಥೆಯ ಪರವಾಗಿ 'ಲಾಸ್ಯ ಸಂಭ್ರಮ' ಎಂಬ ಮೂರು ದಿನದ ರಾಷ್ಟ್ರೀಯ ಮಟ್ಟದ ಕಲಾ ಉತ್ಸವವನ್ನು ವರ್ಷಕೊಮ್ಮೆ ನಡೆಸುತ್ತಾ ಅದರಲ್ಲಿ ವಿಶಿಷ್ಟ ಚೈತನ್ಯ ಮಕ್ಕಳಿಗೆಂದೇ ಒಂದು ಸಂಜೆಯನ್ನು ಮೀಸಲಿಡುತ್ತಾ ಬಂದಿದ್ದಾರೆ. 'ಲಾಸ್ಯ ಸಾಧಕಿ' ಎಂಬ ಬಿರುದು, ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದ್ದಾರೆ. ಇದಲ್ಲದೆ, ತಮ್ಮ ಪತಿ ಶ್ರೀ.

Copyright Protected

---

ಅರುಣ್. ಟಿ.ಆರ್ ಮತ್ತು ಮಕ್ಕಳಾದ ಅನಿರುದ್ಧ ಹಾಗೂ ಅಭಿರಾಮ್ ಅವರ ನೆರವಿನಿಂದ, ಹಳ್ಳಿಯ ಮಕ್ಕಳಿಗೆ ವಿವಿಧ ಅವಕಾಶಗಳನ್ನು ಕಲ್ಪಿಸುವುದಕ್ಕಾಗಿ 'ಹಳ್ಳಿಯೆಡೆಗೆ ಲಾಸ್ಯ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಆಸಕ್ತ ಮಕ್ಕಳಿಗೆ ಭರತನಾಟ್ಯ, ಶಾಸ್ತ್ರೀಯ ಸಂಗೀತ, ಗಣಿತ, ವಿಜ್ಞಾನ, ಆಂಗ್ಲ ಹಾಗೂ ವ್ಯಕ್ತಿತ್ವ ಅಭಿವೃದ್ಧಿ ತರಗತಿಗಳನ್ನು ನಡೆಸುತ್ತಿದ್ದಾರೆ. **ಇವರು ನೂಪುರ ಭ್ರಮರಿ ಯೋಜಿಸಿದ ನೃತ್ಯಶಿಲ್ಪಯಾತ್ರೆಯ ಅಧ್ಯಯನ ವಿದ್ಯಾರ್ಥಿಯೂ ಹೌದು.**

Copyright Protected